ಎಂ.ಎಸ್.ಸೋಮಶೇಖರ್, ಮೈಸೂರು

*ಅರ್ಚಕರು ಪಿಳ್ಳುಜುಟ್ಟನ್ನು ಏಕೆ ಬಿಟ್ಟಿರುತ್ತಾರೆ?*



ಅದು ಸತಿಯೇ ಹೇಳಿ ಬಿಡಿಸಿರುವುದಂತೆ; ಪೂರ್ತಿ ಬೋಳಾದರೆ ಗಂಡನ ಜುಟ್ಟು ತನ್ನ ಕೈಗೆ ಸಿಕ್ಕದಲ್ಲ!

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ನಿದ್ರೆಯೇ ಬಾರದ ಆ ರಾತ್ರಿಯನ್ನು ನೀವು ಹೇಗೆ ಕಳೆಯುವಿರಿ?*

ನಾನು ಕಳೆಯಲು ಹೋಗುವುದೇ ಇಲ್ಲ; ಇಡೀ ರಾತ್ರಿ ಕೂಡುತ್ತೇನೆ, ಅದೇ ಕಳೆಯುತ್ತದೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಹೀಗೇ ಶಾಸಕರು/ಮಂತ್ರಿಗಳೆಲ್ಲರೂ ಜೈಲಿಗೆ ಹೋಗುತ್ತಿದ್ದರೆ ವಿಧಾನಸೌಧ ಖಾಲಿಯಾಗುವುದಿಲ್ಲವೆ ರಾಮ್‌ಜೀ?*

ಚಿಂತೆ ಬೇಡ; ನಮ್ಮ ರಾಜ್ಯ ಎಷ್ಟೇ ಶಾಸಕರು ಜೈಲಿಗೆ ಹೋದರೂ ಆ ಜಾಗ ತುಂಬುವ ಖದೀಮರನ್ನುಳ್ಳ ಅಕ್ಷಯಪಾತ್ರೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಹೂವಿನಿಂದ ಹೂವಿಗೆ ಹಾರುವ ದುಂಬಿಗೂ, ಪಕ್ಷದಿಂದ ಪಕ್ಷಕ್ಕೆ ಹಾರುವ ರಾಜಕಾರಣಿಗೂ ಏನು ವ್ಯತ್ಯಾಸ?*



ದುಂಬಿ ಯಾವಾಗಲೂ ಹೂ ಹೂ ಎನ್ನುತ್ತದೆ; ಪಕ್ಷಾಂತರಿ ಯಾವಾಗಲೂ ಉಹೂ, ಉಹೂ ಎನ್ನುತ್ತಾನೆ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಕರುಣಾಳು ದೇವರು ಸಹ ಕೆಲವೊಮ್ಮೆ ಕ್ರೂರಿಯಾಗುತ್ತಾನಂತೆ?*

ಹೌದು; ಹಬ್ಬಗಳ ದಿನವೇ ಹೂವು, ಹಣ್ಣಿನ ಬೆಲೆ ಏರಿಸಲು ವರ್ತಕರನ್ನು ಪ್ರೇರೇಪಿಸುವುದು ಕ್ರೌರ್ಯದ ಪರಮಾವಧಿಯೇ!

ಸುಧಾ ಓದುಗ, ಊರಿಲ್ಲ

*ಹೆಣ್ಣಿಗೂ, ಟೈಪಿಂಗ್ ಮೆಷಿನ್‌ಗೂ ಇರುವ ವ್ಯತ್ಯಾಸವೇನು?*

ಟೈಪಿಂಗ್‌ನಿಂದ ಬರಹ ಬದಲು, ಹೆಣ್ಣಿನಿಂದ ಹಣೆಬರಹ ಬದಲು!

ಎಂ.ಬಿ. ಶಿವರಾಂ, ಬೆಂಗಳೂರು

*ಕರ್ಮಣ್ಯೇವಾಧಿಕಾರಸ್ತೇ... ಎಂಬುದಕ್ಕೆ ಅತ್ಯುತ್ತಮ ಉದಾಹರಣೆ ಮತದಾನ ಅಲ್ಲವೇ?*

ಅದು ಬಿಟ್ಟಿ ಓಟು ಹಾಕಿದವರಿಗೆ ಮಾತ್ರ; ಮಿಕ್ಕವರಿಗೆ ದ್ರವ್ಯದಾನ ಕದಾಚನ!

ಪಿ.ಜೆ. ರಾಘವೇಂದ್ರ, ಮೈಸೂರು

*ಮಂತ್ರಿಗಳಿಗೆ ಪುನರ್ಜನ್ಮದ ಮೇಲೆ ನಂಬಿಕೆ ಇರುವುದೆ?*

ಮುಂದಿನ ಜನ್ಮ ಬಿಡಿ, ಮುಂದಿನ ಎಲೆಕ್ಷನ್ ಬಗ್ಗೆಯೂ ನಂಬಿಕೆ ಇರಲ್ಲ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಅನ್ನದ ಹಸಿವಿಗೂ, ಹಣದ ಹಸಿವಿಗೂ ಇರುವ ವ್ಯತ್ಯಾಸವೇನು?*

ಕೊಟ್ಟಷ್ಟೂ ಅನ್ನದ ಹಸಿವು ಹಿಂಗುತ್ತದೆ; ಹಣದ ಹಸಿವು ಹಿಗ್ಗುತ್ತದೆ!

ಕೆ. ರಾಮಕೃಷ್ಣ, ಅರಸಿಕೆರೆ

*ರಾಜಕಾರಣಿಗಳೇಕೆ ಹೆಣ್ಣಿನ ಹಿಂದೆ ಬೀಳುತ್ತಾರೆ?*

ಸಹಜವೇ; ರಾಜಕಾರಣಿ ಪದದಲ್ಲೇ ರಾಣಿ ಪದವೂ ಅಡಗಿದೆಯಲ್ಲಾ!

ಎನ್.ವಿ. ಶ್ರೀನಿವಾಸ್, ಮೈಸೂರು

*ಮದುವೆಗಳು ನರಕದಲ್ಲಿ ಆದರೆ ಏನಾಗುತ್ತದೆ?*

ಯಮನೇ ಪುರೋಹಿತ, ಚಿತ್ರಗುಪ್ತರೇ ವಾಲಗದವರು, ಕೋಣವೇ ಗಂಡು ಏರುವ ಕುದುರೆ ಆಗಬೇಕಾಗುತ್ತದೆ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಒಂದಿಷ್ಟು ಹುಸಿಮುನಿಸು, ಒಂದಿಷ್ಟು ಸಿಹಿಗನಸು ಇದ್ದರೆ ಜೀವನ ಹೇಗಿರುತ್ತದೆ?*

ಒಂದಿಷ್ಟೇ ಹಸಿಮೆಣಸಿನೊಡನೆ ಒಂದಷ್ಟು ಸಿಹಿಗೆಣಸು ಸೇವಿಸಿದ ರುಚಿಯಂತೆ!

ಎನ್. ಸಾವಿತ್ರಿಮೂರ್ತಿ, ತುಮಕೂರು

*ಅಲಾರಾಂಗೂ ಈ ರಾಮ್‌ಗೂ ಯಾವ ಸಂಬಂಧ?*

ಬಾಯಿ ಬಿಟ್ಟಾಗಲೆಲ್ಲಾ ತಲೆಯಮೇಲೆ ಮೊಟಕಿಸಿಕೊಳ್ಳುವುದು!

## ಬಹುಮಾನಿತ ಪ್ರಶ್ನೆ

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಹುಡುಗ ಅರೆಬೆತ್ತಲಾದರೆ ಹುಚ್ಚ ಎನ್ನುವ ಮಂದಿ ಹುಡುಗಿ ಅರೆಬೆತ್ತಲಾದರೆ ಜೊಲ್ಲು ಸುರಿಸುತ್ತಾರಲ್ಲಾ...?*

ಇವರಿಗೆ ಆ ದೇಹದ ಹುಚ್ಚು ಹಿಡಿದಿರುತ್ತದಲ್ಲ! ಹುಚ್ಚು ಹಿಡಿದ ನಾಯಿಗೆ ಜೊಲ್ಲು ಸುರಿಯುವುದು ಸಹಜ!

ನರಸಿಂಹ ಎಂ. ಪೈ, ಕಾಸರಕೋಡ

*ಕನ್ನಡದ ಜುಟ್ಟಿಗೆ ಇಂಗ್ಲಿಷ್‌ನ ಮಲ್ಲಿಗೆ ಏಕೆ?*

ಇರಲಿ ಬಿಡಿ; ಕನ್ನಡದ ಕಿವಿಗೆ ಇಂಗ್ಲಿಷ್‌ನ ಚೆಂಡುಹೂವು ಏರಿಸುವುದಕ್ಕಿಂತಲೂ ಇದು ವಾಸಿ!

ಪ್ರಹ್ಲಾದರಾಜು ಬರ್ಲಿ, ದಾವಣಗೆರೆ

*ಸಿನಿಮಾ ನಟ- ನಟಿಯರಿಗೆ ಇರುವಂತೆ ರಾಜಕಾರಣಿಗಳಿಗೆ ದೇವಾಲಯಗಳು ಏಕಿಲ್ಲ?*

ವಿರೋಧಪಕ್ಷದವರು ಬಂದು ವಿಧವಿಧವಾಗಿ ಸಹಸ್ರನಾಮಾರ್ಚನೆ, ಮಂಗಳಾರತಿ ಮಾಡುವ ಭಯ ಇರುವುದರಿಂದ!

ಎಸ್.ಆರ್. ಶ್ರೇಯಸ್, ಮೈಸೂರು

*ಬೆಂಕಿ ಮತ್ತು ಮದ್ಯ ಎರಡೂ ದೇಹವನ್ನು ಬೆಚ್ಚಗಿಡುತ್ತವೆ; ಆಯ್ಕೆಯಗೊಂದಲ, ಸಹಾಯ ಮಾಡುವಿರಾ?*



ಆಯ್ಕೆ ಬಹಳ ಸುಲಭ; ಮದ್ಯವನ್ನು ಬೆಂಕಿಗೆ ಹಾಕಿಬಿಡಿ, ನಿಮ್ಮ ಮನ, ಮನೆ, ಮನೆತನ ಬೆಚ್ಚಗಿರುತ್ತದೆ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಆರು ತಲೆಮಾರು ಕುಳಿತು ತಿಂದರೂ ಕರಗದಷ್ಟು ಆಸ್ತಿ ಇದ್ದರೂ ಇನ್ನೂ ಬೇಕೆಂದು ದೇವರಲ್ಲಿ ಬೇಡುವರಲ್ಲಾ?*

ಏಳನೆಯ ತಲೆಮಾರಿನವರು ಬೀದಿಗೆ ಬಿದ್ದುಬಿಟ್ಟಾರೆಂಬ ಆತಂಕ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಆ ಒಂದು ಮಾತನ್ನು ಆಕೆಗೆ ತಿಳಿಸುವ ಬಗೆ?*

ಯಾರಿಗೂ ಹೇಳಬೇಡಿ ಎನ್ನುತ್ತಾ ಪಿಸುಮಾತಿನಲ್ಲಿ ಯಾರಿಗಾದರೂ ಹೇಳಿಬಿಡಿ; ಒಂದೇ ಗಂಟೆಯಲ್ಲಿ ಆಕೆಗೆ ತಲುಪುತ್ತದೆ!

■ ರಾಮ್